**ಸಿ.ಸಿ.ನಂ.: 2305/2024**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **17-07-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು –ಆರೋಪಿ ಪರ ಕುಮಾರಿ.ಪಿ.ಆರ್.ಎಸ್. ವಕೀಲರಿಂದ</u>**

1. ನಾನು ಪಿ.ಡಬ್ಲೂ.ಡಿ ಇಲಾಖೆಯಲ್ಲಿ ಕಾಂಟ್ರಾಕ್ಟರ ಆಗಿ ಕೆಲಸ ಮಾಡುತ್ತಾ ಬಂದಿರುತ್ತೇನೆ. ಈ ಕುರಿತಾಗಿ ನನಗೆ ನನ್ನ ಫಿರ್ಯಾದಿಯಲ್ಲಿ ನಮೂದಿಸಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿತರು ನನ್ನ ಸ್ನೇಹಿತನಾಗಿರುತ್ತಾನೆ. ಆರೋಪಿಯ ನನಗೆ 4-5 ವರ್ಷಗಳಿಂದ ಪರಿಚಯ ಇರುತ್ತದೆ. ನಾನು ಆರೋಪಿತನಿಗೆ ಮಾತ್ರ ಹಣವನ್ನು ನೀಡಿದ್ದು, ಬೇರೆ ಯಾರಿಗೂ ಹಣವನ್ನು ನೀಡಿರುವುದಿಲ್ಲ.
2. ಆರೋಪಿತನು 2 ವರ್ಷದ ಹಿಂದೆ ನನ್ನ ಬಳಿ ಹಣವನ್ನು ಕೇಳಲು ಬಂದಿರುತ್ತಾನೆ. ಆರೋಪಿತನಿಗೆ ನಾನು ಆತನು ನನ್ನ ಬಳಿ ಒಂದೇ ಸಲ ಕೇಳಿದಾಗ ಹಣವನ್ನು ನೀಡಿರುತ್ತೇನೆ. ಆರೋಪಿತನಿಗೆ ನಾನು ಹಣವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಸದ್ರಿ ಸಂದರ್ಭದಲ್ಲಿ ನಮ್ಮ ಮನೆಯಲ್ಲಿ ಯಾರೂ ಇರಲಿಲ್ಲ. ನಾವು ನಮ್ಮ ಮನೆಯಲ್ಲಿ 4 ಜನರು ಇದ್ದು, ಆರೋಪಿತನು ನಮ್ಮ ಅಂಗಡಿಯ ಹತ್ತಿರ ಬಂದು ಹಣವನ್ನು ಕೇಳಿರುತ್ತಾನೆ. ನಮ್ಮ ಅಂಗಡಿಯ ಹತ್ತಿರ ಆತನಿಗೆ ಹಣವನ್ನು ನೀಡುವ ಸಂದರ್ಭದಲ್ಲಿ ನಾನು ಹಾಗೂ ಆರೋಪಿ ಮತ್ತು ದತ್ತಾ ಭಂಡಾರಿ ಇದ್ದರು. ದತ್ತಾ ಭಂಡಾರಿ ಇವರು ಆರೋಪಿಯ ಸ್ನೇಹಿತನಾಗಿರುತ್ತಾನೆ.
3. ನಾನು ಆರೋಪಿತನಿಗೆ ನಗದಾಗಿ ಹಣವನ್ನು ನೀಡಿರುತ್ತೇನೆ. ನಾನು ಹಣನ್ನು ನೀಡುವ ಸಂದರ್ಭದಲ್ಲಿ ಯಾವುದೇ ಭಾವಚಿತ್ರ ಹಾಗೂ ವಿಡಿಯೋವನ್ನು ಮಾಡಿರುವುದಿಲ್ಲ, ಸಾಕ್ಷಿಯು

ಮುಂದುವರಿದು ನಾನು ಚೆಕ್ಕನ್ನು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸ್ವಲ್ಪ ಸಮಯದ ನಂತರ ಮುಂದುವರಿದು ಆರೋಪಿತನಿಗೆ ಸಾಲವನ್ನು ನೀಡಿದ 15 ದಿನಗಳ ನಂತರ ಆರೋಪಿತನ ಬಳಿ ಸದ್ರಿ ಹಣವನ್ನು ನಾನು ಕೇಳಿದ್ದು, ಆ ಸಂದರ್ಭದಲ್ಲಿ ಆತನು ನನಗೆ ಚೆಕ್ಕನ್ನು ನೀಡಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಹಣವನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಚೆಕ್ಕನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ಪ್ರೀತಿಯಿಂದ ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿತನಿಗೆ ಹಣವನ್ನು ನೀಡುವ ಸಂದರ್ಭದಲ್ಲಿ ಯಾವುದೇ ಕರಾರನ್ನು ಮಾಡಿಕೊಂಡಿರುವುದಿಲ್ಲ. ಈ ರೀತಿಯಾಗಿ ಕರಾರನ್ನು ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿತನಿಗೆ ಹಣವನ್ನು ನೀಡುವ ಸಂದರ್ಭದಲ್ಲಿ ನಾನು ಆತನಿಂದ ಭದ್ರತೆಗಾಗಿ ಏನನ್ನು ಪಡೆದುಕೊಂಡಿರುವುದಿಲ್ಲ. ಸಾಮಾನ್ಯವಾಗಿ ಯಾರೂ ಸಹ ಭದ್ರತೆಗಾಗಿ ಏನನ್ನು ಪಡೆದುಕೊಳ್ಳದೇ ಹಣವನ್ನು ನೀಡುವುದಿಲ್ಲ ಎಂದರೆ ಸಾಕ್ಷಿಯು ನಾನು ಪ್ರೀತಿಯಿಂದ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

4. ಆರೋಪಿಯು ಮೀನುಗಾರಿಕಾ ವ್ಯಾಪಾರವನ್ನು ಮಾಡುತ್ತಾನೆ. ಆರೋಪಿತನು ಒಂದು ವರ್ಷಕ್ಕೆ ರೂ.10 ಲಕ್ಷವನ್ನು ದುಡಿಯುತ್ತಾನೆ. ನಾನು ಆರೋಪಿತನಿಗೆ ಸಾಲವನ್ನು ನೀಡಿದ್ದೇನೆ ಎನ್ನಲಾದ ಹಣವು ನನ್ನ ಮನೆಯಲ್ಲಿ ಇತ್ತು. ಸದ್ರಿ ಹಣವನ್ನು ನಾನು ನನ್ನ ಖಾತೆಯಿಂದ withdraw ಮಾಡಿಕೊಂಡು ತೆಗೆದುಕೊಂಡು ಬಂದಿರುತ್ತೇನೆ. ಈ ಕುರಿತಾಗಿ ನನಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಖಾತೆಯಲ್ಲಿ ಸಾಕಷ್ಟು ವ್ಯವಹಾರಗಳು ಇರುವುದರಿಂದ ಅವು ಯಾವುದೇ ಎಂದು ನನಗೆ ತಿಳಿದಿಲ್ಲ. ನಾನು ಆರೋಪಿತನಿಗೆ ಹಣವನ್ನು ನೀಡಲು ಯಾವ ದಿನಾಂಕದಂದು ನನ್ನ ಖಾತೆಯಿಂದ withdraw ಮಾಡಿದ್ದೇನೆ ಎಂದು ನನಗೆ

ನೆನಪಿಲ್ಲ. ನಾನು ಆರೋಪಿತನಿಗೆ ಖಾತೆಯಿಂದ withdraw ಮಾಡಿದ ಕುರಿತಾಗಿ Account Statement ನ್ನು ನೀಡಬಹುದು.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ